ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳ ಕುರಿತ ಚರ್ಚೆಗಳ ಬಹುತೇಕ ಸಂದರ್ಭಗಳಲ್ಲಿ ಮುನ್ನೆಲೆಗೆ ಬರುವ ಸಂಗತಿಗಳಲ್ಲೊಂದು – ಮಕ್ಕಳಿಗೆ ಲಿಂಗ ಸಮಾನತೆಯ ಅರಿವು ಮೂಡಿಸುವಲ್ಲಿ ನಾವು ವಿಫಲವಾಗಿರುವುದು. ಈ ವೈಫಲ್ಯ ಕುಟುಂಬದ್ದೂ ಹೌದು, ಶಾಲೆಯದೂ ಹೌದು, ಒಟ್ಟಾರೆ ಸಮಾಜದ್ದೂ ಹೌದು. ಗಂಡಿನ ಹಮ್ಮಿಗೆ ಕೊಂಚವೂ ಅವಕಾಶವಿಲ್ಲದ ಯಾವುದೇ ಕ್ಷೇತ್ರವನ್ನು ಗುರ್ತಿಸುವುದು ಸುಲಭವಲ್ಲ. ಆ ಮಟ್ಟಿಗೆ ಪುರುಷ ಪ್ರಾಧಾನ್ಯ ಸಮಾಜವನ್ನು ಆವರಿಸಿಕೊಂಡಿದೆ.

‘ಲಿಂಗ ಸಮಾನತೆ’ಯ ಅರಿವನ್ನು ಹಿರಿಯರಿಗೆ ಕಲಿಸುವುದು ಕಷ್ಟ. ಹೆಣ್ಣು ಮತ್ತು ಗಂಡಿನ ನಡುವೆ ಭೇದಭಾವ ಮಾಡುವುದಿಲ್ಲ ಎಂದು ಹೇಳಿಕೊಳ್ಳುವವರು ಕೂಡ ಕೆಲವು ಸಂದರ್ಭಗಳಲ್ಲಿ ತಮಗರಿವಿಲ್ಲದೆಯೇ ಪುರುಷ ಪಕ್ಷಪಾತಿಗಳಾಗಿ ಕಾಣಿಸುವುದಿದೆ. ಗಂಡಸರ ಮಾತಿರಲಿ, ಅನೇಕ ಮಹಿಳೆಯರಿಗೆ ಕೂಡ ಲಿಂಗ ತಾರತಮ್ಯದ ಕುರಿತು ಸ್ಪಷ್ಟವಾದ ನಿಲುವುಗಳಿರುವುದಿಲ್ಲ. ಆ ಕಾರಣದಿಂದಲೇ, ಅತ್ಯಾಚಾರದಂತಹ ಅಮಾನವೀಯ ಘಟನೆಗಳು ನಡೆದಾಗಲೂ, ಆ ಪ್ರಸಂಗದಲ್ಲಿ ಹೆಣ್ಣುಮಕ್ಕಳ ಪಾತ್ರ–ಪ್ರಚೋದನೆಯ ಕುರಿತು ಕೆಲವರು ಮಾತನಾಡುತ್ತಾರೆ. ಲಿಂಗಭೇದವಿಲ್ಲದ ಸಮ ಸಮಾಜ ನೂರಕ್ಕೆ ನೂರರಷ್ಟು ಅನುಷ್ಠಾನಕ್ಕೆ ಬರುವವರೆಗೂ, ‘ಲಿಂಗ ಸಮಾನತೆ’ ಎನ್ನುವುದು ಸದಾ ಕಾಲ ನೆನಪಿನಲ್ಲಿ ಇರಿಸಿಕೊಳ್ಳಬೇಕಾದ ಹಾಗೂ ಅನುಸರಿಸಬೇಕಾದ ಒಂದು ಮಾದರಿ. ಪ್ರಜ್ಞಾಪೂರ್ವಕವಾಗಿ ಈ ಮಾದರಿಯನ್ನು ಅನುಸರಿಸಿದಾಗಷ್ಟೇ ಸ್ತ್ರೀಲೋಕದ ಬಗೆಗಿನ ಒಂದಷ್ಟು ಪೂರ್ವಗ್ರಹಗಳನ್ನಾದರೂ ಮೀರುವುದು ಸಮಾಜಕ್ಕೆ ಸಾಧ್ಯವಾಗಬಹುದು.

## ಮಕ್ಕಳ ಮನಸ್ಸಲ್ಲಿ ಬಿತ್ತನೆ

‘ಲಿಂಗ ಸಮಾನತೆ’ಯ ಮೊದಲ ಬೀಜ ಬಿತ್ತನೆಯಾಗಬೇಕಾದುದು ಮಕ್ಕಳ ಮನಸ್ಸಿನಲ್ಲಿ. ಎಳೆಯ ಮನಸ್ಸಿನಲ್ಲಿ ಲಿಂಗಭೇದದ ವಿಕಾರಗಳು ಮೂಡದಂತೆ ಎಚ್ಚರವಹಿಸುವುದು ಪಾಲಕರ ಕರ್ತವ್ಯವೂ ಹೌದು, ಶಿಕ್ಷಕರ ಜವಾಬ್ದಾರಿಯೂ ಹೌದು. ಮಕ್ಕಳ ಬಾಲ್ಯದಲ್ಲಿ ‘ಲಿಂಗ ಸಮಾನತೆ’ ಪಾಠಗಳು ಸಹಜವಾಗಿ ಮೈಗೂಡಿದಲ್ಲಿ, ಆ ಮಗು ಬೆಳೆದ ಮೇಲೂ ಪೂರ್ವಗ್ರಹಗಳಿಂದ ದೂರವಿರುವುದು ಸಾಧ್ಯವಿದೆ. ಹಾಗಾಗಿಯೇ, ‘ಲಿಂಗಭೇದ’ವನ್ನು ತೊಡೆದು ಹಾಕಬೇಕೆಂದು ಬಯಸುವವರು ಮೊದಲು ಹತ್ತಿರವಾಗಬೇಕಾದುದು ಮಕ್ಕಳಿಗೆ.

ನಮ್ಮ ಮಕ್ಕಳು ‘ಲಿಂಗ ಸಮಾನತೆ’ಯನ್ನು ರೂಢಿಸಿಕೊಳ್ಳಬೇಕೆಂದು ಅನೇಕ ಪಾಲಕರು ಬಯಸುತ್ತಾರೆ. ಹಲವು ಶಿಕ್ಷಕರು ಕೂಡ ವಿದ್ಯಾರ್ಥಿಗಳಲ್ಲಿನ ಪೂರ್ವಗ್ರಹಗಳನ್ನು ತೊಡೆದುಹಾಕುವ ಹಂಬಲ ಹೊಂದಿರುತ್ತಾರೆ. ಆದರೆ, ಈ ಪ್ರಯತ್ನವನ್ನು ಮಾಡುವುದು ಹೇಗೆ ಎನ್ನುವುದು ಅನೇಕರಿಗೆ ಸ್ಪಷ್ಟವಿರುವುದಿಲ್ಲ. ಈ ನಿಟ್ಟಿನಲ್ಲಿ ನಮಗೆ ನೆರವಿಗೆ ಬರುವುದು, ಕಥೆಗಳೆನ್ನುವ ದಾರಿದೀವಿಗೆಗಳು!

ಹಿಂದೆಲ್ಲ ಮಕ್ಕಳನ್ನು ಕೂರಿಸಿಕೊಂಡು ಅಜ್ಜಿಯರು ಕಥೆ ಹೇಳುತ್ತಿದ್ದರು. ಆ ಕಾರಣದಿಂದಲೇ ‘ಅಜ್ಜಿ ಕಥೆ’ ಎನ್ನುವ ಪ್ರಭೇದವೇ ಇದೆ. ಮಕ್ಕಳು ಮಲಗುವಾಗ ಕಥೆ ಹೇಳುವುದು ಅನೇಕ ಕುಟುಂಬಗಳ ದಿನಚರಿಯೇ ಆಗಿತ್ತು. ಆ ಕಥೆಗಳ ಮೂಲಕ ಮಕ್ಕಳ ಮನಸ್ಸಿನಲ್ಲಿ ಒಳ್ಳೆಯ ನಡವಳಿಕೆಗಳನ್ನು ಪರೋಕ್ಷವಾಗಿ ರೂಢಿಸುವ ಪ್ರಯತ್ನ ನಡೆಯುತ್ತಿತ್ತು. ಆದರೆ, ಈಗ ಮಕ್ಕಳಿಗೆ ಕಥೆ ಹೇಳುವ ರೂಢಿಯೇ ಅನೇಕ ಕುಟುಂಬಗಳಲ್ಲಿ ಹೊರಟುಹೋಗಿದೆ. ಕಥೆಗಳನ್ನು ಹೇಳುವ ಕೆಲಸ ಅಜ್ಜಿಯಿಂದ, ಅಮ್ಮ–ಅಪ್ಪನಿಂದ ಮೊಬೈಲ್ ಫೋನ್‌ಗೆ ಬದಲಾಗಿದೆ. ಕಥೆಗಳ ಜಾಗದಲ್ಲಿ ಮೊಬೈಲ್ ಬಂದಿರುವುದರಿಂದ ಮೂರು ಬಗೆಯ ತೊಡಕುಗಳನ್ನು ಗುರ್ತಿಸಬಹುದು. ಒಂದು, ಕಥೆಗಳನ್ನು ಹೇಳುವ ಕೇಳುವ ಕ್ರಿಯೆಯಲ್ಲಿರುವ ಮಾರ್ದವತೆ, ಆತ್ಮೀಯ ಭಾವ ಮೊಬೈಲ್‌ನಲ್ಲಿ ದೊರೆಯುವುದಿಲ್ಲ. ಎರಡು, ಮಕ್ಕಳ ಮನೋವಿಕಾಸಕ್ಕೆ ಕಥೆಗಳು ಕಲ್ಪಿಸುವ ಅವಕಾಶವನ್ನು ಮೊಬೈಲ್ ಕಲ್ಪಿಸುವುದಿಲ್ಲ. ಮೂರನೆಯದು, ಆರೋಗ್ಯಕ್ಕೆ ಸಂಬಂಧಿಸಿದ ತೊಡಕು. ಮೊಬೈಲ್ ಪರದೆ ಎಳೆಯ ಕಣ್ಣುಗಳ ಹೊಳಪನ್ನು ಕುಂದಿಸುತ್ತದೆ ಹಾಗೂ ಮಾನಸಿಕ ಬೆಳವಣಿಗೆಗೂ ಅಡಚಣೆ ಉಂಟುಮಾಡುತ್ತದೆ. ಈ ತೊಡಕುಗಳನ್ನು ಬಿಡಿಸಿಕೊಳ್ಳಲು ಇರುವುದೊಂದೇ ದಾರಿ, ಕಥೆಗಳ ಜಗತ್ತಿಗೆ ಮರಳುವುದು.

## ದಾರಿಯಲ್ಲಿ ನೂರೆಂಟು ಬಿಕ್ಕಟ್ಟು

ಸರಿ, ಮಕ್ಕಳಿಗೆ ಕಥೆ ಹೇಳುವುದನ್ನು ರೂಢಿಸಿಕೊಳ್ಳಲು ಪಾಲಕರು ಮುಂದಾಗುತ್ತಾರೆ ಎಂದುಕೊಳ್ಳೋಣ. ಆಗಲೂ ಕೆಲವು ಸಮಸ್ಯೆಗಳಿವೆ. ಮಕ್ಕಳಿಗೆ ಬೇಕಾದ ಕಥೆಗಳನ್ನು ಎಲ್ಲಿಂದ ತರುವುದು? ಬದಲಾಗುತ್ತಿರುವ ಜಗತ್ತಿಗೆ ತಕ್ಕಂತೆ ಹೊಸ ಕಾಲದ ಕಥೆಗಳನ್ನು ಎಲ್ಲಿಂದ ಹೊಂದಿಸಿಕೊಳ್ಳುವುದು? ಮಕ್ಕಳ ಮನರಂಜನೆ ಮತ್ತು ಮನೋವಿಕಾಸಕ್ಕೆ ಪೂರಕವಾದ ಕಥೆಗಳು ನಮ್ಮ ನಡುವೆ ರೂಪುಗೊಳ್ಳುತ್ತಿವೆಯೆ? ಈ ಪ್ರಶ್ನೆಗಳಿಗೆ ನಮ್ಮ ಸಾಹಿತ್ಯಲೋಕದಲ್ಲೇನಾದರೂ ಉತ್ತರ ದೊರೆಯಬಹುದೇ ಎಂದು ನೋಡಿದರೆ, ಅಲ್ಲೇನೂ ಆಶಾದಾಯಕ ಚಿತ್ರಗಳು ಕಾಣಿಸುವುದಿಲ್ಲ. ಇಂಗ್ಲಿಷ್‌ನಲ್ಲಿ ಮಕ್ಕಳ ಸಾಹಿತ್ಯಲೋಕದ ಸಮೃದ್ಧಿಯನ್ನು ಕಾಣಬಹುದು. ಆದರೆ, ಕನ್ನಡದಲ್ಲಿ ಅಂಥ ಸಮೃದ್ಧಿ–ವೈವಿಧ್ಯ ಕಾಣಿಸುತ್ತಿಲ್ಲ.

ಒಂದಂತೂ ನಿಜ. ಮಕ್ಕಳಿಗೆ ಕಥೆ ಹೇಳಲು ಹೊರಡುವವರು ಕನ್ನಡ ಸಾಹಿತ್ಯದಿಂದ ಹೆಚ್ಚಿನ ಬಂಡವಾಳವನ್ನೇನೂ ನಿರೀಕ್ಷಿಸುವಂತಿಲ್ಲ. ಪಾಲಕರು ಮತ್ತು ಶಿಕ್ಷಕರು ಸ್ವತಃ ಕಥೆಗಾರರಾಗಬೇಕಾದ ಸನ್ನಿವೇಶ ಇಂದಿನದು. ತಮ್ಮ ಅನುಭವಗಳನ್ನು ಆಧರಿಸಿ, ಕಾಲಕ್ಕೆ ತಕ್ಕಂತೆ ಕಥೆಗಳನ್ನು ಕಟ್ಟುವ ಸೃಜನಶೀಲತೆಯನ್ನು ಅವರು ರೂಢಿಸಿಕೊಳ್ಳಬೇಕಾಗಿದೆ.

ಕಥೆ ಹೊಂದಿಸಿಕೊಂಡ ಮಾತ್ರಕ್ಕೆ ಸಮಸ್ಯೆ ಬಗೆಹರಿಯುವುದಿಲ್ಲ. ಮಕ್ಕಳಿಗೆ ಕಥೆಯನ್ನು



ಮಕ್ಕಳ ಮನೋವಿಕಾಸಕ್ಕೆ ಕಥೆಗಳು ಕಲ್ಪಿಸುವ ಅವಕಾಶವನ್ನು ಮೊಬೈಲ್ ಕಲ್ಪಿಸುವುದಿಲ್ಲ. ಆರೋಗ್ಯಕ್ಕೆ ಸಂಬಂಧಿಸಿದ ತೊಡಕು. ಮೊಬೈಲ್ ಪರದೆ ಎಳೆಯ ಕಣ್ಣುಗಳ ಹೊಳಪನ್ನು ಕುಂದಿಸುತ್ತದೆ ಹಾಗೂ ಮಾನಸಿಕ ಬೆಳವಣಿಗೆಗೂ ಅಡಚಣೆ ಉಂಟುಮಾಡುತ್ತದೆ. ಈ ತೊಡಕುಗಳನ್ನು ಬಿಡಿಸಿಕೊಳ್ಳಲು ಇರುವುದೊಂದೇ ದಾರಿ, ಕಥೆಗಳ ಜಗತ್ತಿಗೆ ಮರಳುವುದು.